# ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ಪ್ರಭಾವ

**ಗುರುಸ್ವಾಮಿ ಹಿರೇಮಠ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು,
ನವನಗರ ಬಾಗಲಕೋಟೆ.

**DOI: https://doi.org/10.5281/zenodo.18787968**

## ABSTRACT:

ಭಾಷೆ ಜೀವ ಸಂಕುಲಗಳ ಸಂಪರ್ಕ ಜಾಲವಾಗಿದೆ. ಪ್ರತಿಯೊಂದು ಜೀವಿಯೂ ತನ್ನ ಭಾವನೆಗಳನ್ನು, ಸುಖ-ದುಃಖಗಳನ್ನು ಹಂಚಿಕೊಳ್ಳುವ ಮತ್ತು ಬಾಂಧವ್ಯವನ್ನು ಕಟ್ಟಿಕೊಳ್ಳುವ, ಮುಂದುವರೆಸುವ ಪ್ರತಿ ಹಂತದಲ್ಲೂ ಭಾಷೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅದರಲ್ಲೂ ಮನುಷ್ಯ ಸಂಬಂಧಗಳು, ಸಾಮಾಜಿಕ ಬಂಧಗಳು, ಸಂಘಟನಾತ್ಮಕ ಮತ್ತು ವಿಘಟನಾತ್ಮಕ ಸಂಗತಿಗಳು ನಿರ್ಧಾರವಾಗುವುದೇ ಈ ಭಾಷೆಯಿಂದ. ಹಾಗಾಗಿ ಈ ಭಾಷಾ ವ್ಯವಸ್ಥೆ ಮನುಷ್ಯ ಬದುಕಿನ ವ್ಯಷ್ಟಿ ಮತ್ತು ಸಮಷ್ಟಿ ಸ್ಥಿತಿಯನ್ನು ರೂಪಿಸುವಲ್ಲಿ ಮಹತ್ವದ ಪ್ರಭಾವವನ್ನು ಬೀರಿದರೂ, ಈ ಭಾಷೆಯ ಮೇಲೂ ಇದನ್ನು ಪ್ರಭಾವಿಸುವ ಸಂಗತಿಗಳೂ ಮಹತ್ತರ ಪಾತ್ರವನ್ನು ವಹಿಸುತ್ತವೆ.

ಅದು ಕಲಿಕಾ ವಾತಾವರಣವನ್ನು ಮೊದಲ್ಗೊಂಡು ವ್ಯಾವಹಾರಿಕ ಸಂಬಂಧಗಳಲ್ಲಿ, ರಾಜತಾಂತ್ರಿಕ ಒಪ್ಪಂದಗಳಲ್ಲಿ, ವೈಯಕ್ತಿಕ ಹಾಗೂ ಸಾಮುದಾಯಿಕ ಸಂಬಂಧಗಳ ಸೌಹಾರ್ದತೆ ಮತ್ತು ಸಂಘರ್ಷಾತ್ಮಕ ಸ್ಥಿತಿಗತಿಗೆ ಇದೊಂದು ಪ್ರಭಾವಿ ವೇದಿಕೆಯಾಗಿ ಪರಿಗಣಿಸಲ್ಪಡುತ್ತದೆ. ಜೊತೆಗೆ ಸಂವಹನವನ್ನು ಸಕಾರಾತ್ಮಕ ಹಾಗೂ ಋಣಾತ್ಮಕವಾಗಿಯೂ ವಿಸ್ತರಿಸುವ ಮತ್ತು ಪ್ರಸ್ತುತೀಕರಣಗೊಳಿಸುವಲ್ಲಿ ಸಾಮಾಜಿಕ ಮಾಧ್ಯಮಗಳು ಉಪಯುಕ್ತವೆನಿಸುತ್ತವೆ. ಅದರಲ್ಲೂ ಮಾಹಿತಿ ತಂತ್ರಜ್ಞಾನದಲ್ಲಿ ಆಗುತ್ತಿರುವ ಅಭಿವೃದ್ಧಿಯ ಪರಿಣಾಮವಾಗಿ ಕ್ರಾಂತಿಕಾರಕವಾದ ಬದಲಾವಣೆ ಬದುಕಿನಲ್ಲಿ ಘಟಿಸುತ್ತಿವೆ. ಇದಕ್ಕೆ ಸಾಮಾಜಿಕ ಮಾಧ್ಯಮಗಳ ಕೊಡುಗೆ ಮತ್ತು ಹೊಣೆಗಾರಿಕೆ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಬಾಲ-ವೃದ್ಧರಾದಿಯಾಗಿ ಹದಿಹರೆಯದವರು, ಶಿಕ್ಷಣ, ಉದ್ಯಮ-ಉದ್ಯೋಗ, ಕ್ರೀಡಾ, ಮನರಂಜನಾ ಕ್ಷೇತ್ರದಲ್ಲಿ ಗುರುತಿಸಿಕೊಂಡವರು ಮತ್ತು ಆಡಳಿತಾತ್ಮಕ ವರ್ಗದ ನೀತಿ-ನಿರೂಪಕರು ಸಾಮಾಜಿಕ ಮಾಧ್ಯಮಗಳ ಪ್ರಭಾವಕ್ಕೆ ಒಳಗಾಗುತ್ತಿರುವ ಕಾರಣ ನಮ್ಮ ಚಿಂತನೆ ಮತ್ತು ಭಾಷಾ ರಚನೆಯಲ್ಲೂ ಮಹತ್ತರವಾದ ಪಲ್ಲಟಗಳು ಘಟಿಸುತ್ತಿವೆ.

ಹಾಗಾಗಿ ಇಂತಹ ವಾತಾವರಣದಿಂದಾಗಿ ಭಾಷಾ ವಲಯಕ್ಕೆ ಇನ್ನಿಲ್ಲದ ಅವಕಾಶಗಳ ಲಭ್ಯತೆ ಮತ್ತು ವಂಚನೆಗಳೂ ಹೆಚ್ಚುತ್ತಿವೆ. ಅದರಲ್ಲೂ ಅನೇಕ ಭಾಷಾ ಪ್ರಭೇದಗಳು ಅತ್ಯಂತ ಸ್ಪರ್ಧಾತ್ಮಕ, ಸವಾಲಿನ ಸಂದರ್ಭಗಳನ್ನು ಎದುರಿಸುತ್ತಿದ್ದರೆ; ಇನ್ನು ಕೆಲವು ಪ್ರಭೇದಗಳು ಸಕಾರಾತ್ಮಕ ಬೆಳವಣಿಗೆಯನ್ನು ಕಂಡುಕೊಳ್ಳುತ್ತಿವೆ. ಸಾಂಪ್ರದಾಯಿಕ ಭಾಷಾ ಪ್ರಯೋಗಗಳು, ವ್ಯಾಕರಣ, ಛಂದಸ್ಸು, ಅಲಂಕಾರಗಳಲ್ಲಿ ಪಲ್ಲಟವಾಗುತ್ತಿದೆ. ಇದರ ಪರಿಣಾಮವಾಗಿ ಸಾಮಾಜಿಕ ಜನ-ಜೀವನದ ವಿಧಾನದ ಮೇಲೂ ತೀವ್ರತರನಾದ ತಿರುವುಗಳಾಗುತ್ತಿವೆ. ಇದರಿಂದಾಗಿ ಬಲಿಷ್ಠ ಭಾಷೆಗಳು, ಸಾಂಸ್ಕೃತಿಕ ಸಂಪ್ರದಾಯಗಳು ಸಹ ವೈರುಧ್ಯತೆಗಳಿಗೆ ತೆರೆದುಕೊಳ್ಳುವುದು

ಅನಿವಾರ್ಯವೆಂಬಂತಾಗಿದೆ. ಇದು ಜಾಗತಿಕ ವಲಯದ ಆಗು-ಹೋಗುಗಳು ತೀವ್ರತರನಾದ ಪ್ರತಿರೋಧವನ್ನು ಎದುರಿಸುತ್ತಿವೆ. ಈ ಎಲ್ಲ ಸಂಗತಿಗಳನ್ನು ಅನುಲಕ್ಷಿಸಿ ವಿಶ್ಲೇಷಿಸುವ ಹಾಗೂ ಪ್ರಕಟಿತ ಮತ್ತು ಜನಮಾನಸದ ಆಲೋಚನಾಕ್ರಮಗಳನ್ನು ಗ್ರಹಿಸುವ ಉದ್ದೇಶವನ್ನು ಈ ಲೇಖನ ಹೊಂದಿದೆ.

**KEYWORDS:**

ಭಾಷೆ, ಸಾಮಾಜಿಕ ಮಾಧ್ಯಮಗಳು, ಜಾಲತಾಣಗಳು, ಫೇಸ್‌ಬುಕ್, ಟ್ವಿಟರ್, ವಾಟ್ಸಾಪ್.

**ಪೀಠಿಕೆ:**

ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ಪ್ರಭಾವವು ದೊಡ್ಡ ಮಟ್ಟದಲ್ಲಿ ಪ್ರಭಾವಿಸಲ್ಪಡುತ್ತಿದೆ ಎನ್ನುವ ಅಭಿಪ್ರಾಯ ಗಟ್ಟಿಗೊಳ್ಳುತ್ತಿದೆ. ಅಲ್ಲದೇ ಇವತ್ತು ಪ್ರಪಂಚದಾದ್ಯಂತ ದೈನಂದಿನ ಬದುಕಿನ ನೈಸರ್ಗಿಕ ಭಾಗವಾಗಿದೆ. ಜಗತ್ತಿನ ಮೂಲೆ-ಮೂಲೆವರೆಗೆ ವಾಟ್ಸಾಪ್, ಫೇಸ್‌ಬುಕ್ ವ್ಯವಸ್ಥೆ ನಮ್ಮ ಸಂವಹನ ಸಾಧನವಾಗಿದೆ. ಇದು ನೆಟ್‌ವರ್ಕ್ ಅನ್ನು ವಿಸ್ತರಿಸುವ, ಹೊಸ ಜ್ಞಾನವನ್ನು ಹೊಂದುವ ಮತ್ತು ಬದುಕಿನ ಪ್ರತಿಯೊಂದು ರಂಗದಲ್ಲಿ ಅಮೂಲ್ಯವಾದ ಸಹಾಯವನ್ನು ಪಡೆಯಲು ಸಾಧ್ಯವಾಗಿಸುತ್ತಿದೆ. ಅದರಲ್ಲೂ ತಾಂತ್ರಿಕ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿರುವ ಹೊತ್ತಿನಲ್ಲಿ ಕೆಲವಾರು ವರ್ಷಗಳಲ್ಲಿ ಆಗುತ್ತಿರುವ ಪರಿಣಾಮಗಳು ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಇದರ ಪರಿಣಾಮವಾಗಿ ಸಾಮಾಜಿಕ ಮಾಧ್ಯಮಗಳು ಭಾಷಾ ವ್ಯವಸ್ಥೆಯೊಂದಿಗೆ ಅದರ ಬಳಕೆ, ಪರಂಪರೆ ಮತ್ತು ಸಾಂಸ್ಕೃತಿಕ ಜಾಲಗಳನ್ನು ವೇಗವಾಗಿ ಆವರಿಸುತ್ತಾ ಮಹತ್ವಪೂರ್ಣ ಬದಲಾವಣೆಗೆ, ಪಲ್ಲಟಗಳಿಗೆ ಸಾಕ್ಷಿಯಾಗುತ್ತಿವೆ. ಈ ಎಲ್ಲ ಸಂಗತಿಗಳನ್ನು ಆಧರಿಸಿ ಕೆಲ ಸಂದೇಹಗಳನ್ನು ಮತ್ತು ಪ್ರಶ್ನೆಗಳನ್ನು ಕೇಳುವ, ಕೇಳಿಸಿಕೊಳ್ಳುವ ಅನಿವಾರ್ಯತೆ ಬಹು ಭಾಷೆಗಳಿಗೆ ಬಂದೊದಗಿದೆ.

ಹಾಗಾಗಿ ಈ ಕೆಲವು ಪ್ರಶ್ನೆಗಳನ್ನು ಪ್ರಧಾನವಾಗಿರಿಸಿಕೊಂಡು ಇರಬಹುದಾದ ಸೂಕ್ಷ್ಮತೆಗಳನ್ನು ಮತ್ತು ಸಾಧ್ಯತೆಗಳನ್ನು ತಳ್ಳಿಹಾಕದೇ ನೋಡಬೇಕಿದೆ. ಆದ್ದರಿಂದ ಈ ಸಾಮಾಜಿಕ ಮಾಧ್ಯಮಗಳ ಪ್ರಭೇದಗಳು ಎಷ್ಟು? ಜೊತೆಗೆ ಈ ಸಾಮಾಜಿಕ ಮಾಧ್ಯಮಗಳಿಗೆ ನಾಗರಿಕ ಸಮಾಜದ ಜವಾಬ್ದಾರಿಗಳು ಇವೆಯೇ? ಈ ಸಾಮಾಜಿಕ ಮಾಧ್ಯಮಗಳನ್ನು ಬಳಸುವವರನ್ನು ಅರ್ಥೈಸಿಕೊಳ್ಳುವ ಮಾನದಂಡಗಳೇನು? ಇದರೊಟ್ಟಿಗೆ ಈ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟುವಲ್ಲಿ ಭಾಷಾ ತಜ್ಞರ ಜವಾಬ್ದಾರಿ ಹಾಗೂ ಪಾತ್ರಗಳನ್ನು ನಿಭಾಯಿಸುವ ಮತ್ತು ಮಾನ್ಯಮಾಡುವ ಸ್ಥಿತಿಯಲ್ಲಿ ಸಾಮಾಜಿಕ ಸಂಬಂಧಗಳು ಇವೆಯೇ? ಇರುವುದಾದರೆ ಭಾಷಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳನ್ನು ತಡೆಗಟ್ಟುವಷ್ಟು ಪ್ರಬಲವಾಗಿವೆಯೇ? ಅದರಲ್ಲೂ ಈ ವಿಷಯವಾಗಿ ಯುವ ಜನಾಂಗದ ಜವಾಬ್ದಾರಿಗಳನ್ನು ಎಚ್ಚರಿಸುವ ಮತ್ತು ಅವರ ಭಾವನೆಗಳನ್ನು

ಸಂಸ್ಕಾರಗೊಳಿಸುವಷ್ಟು ಮಾಧ್ಯಮಗಳು ಪ್ರಬಲವಾಗಿವೆಯೇ? ಜೊತೆಗೆ ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ದುರ್ಬಳಕೆಗೆ ಪರಿಹಾರೋಪಾಯಗಳು ಇವೆಯೇ? ಇರುವುದಾದರೆ ಅವುಗಳ ಸಾಫಲ್ಯದ ಮಾನದಂಡಗಳೇನು? ಅಲ್ಲದೇ ಭಾಷೆಯ ಮೇಲಾಗುತ್ತಿರುವ ಸಾಮಾಜಿಕ ಮಾಧ್ಯಮದ ದುರ್ಬಳಕೆಗೆ ಕ್ರಮಗಳನ್ನು ವ್ಯವಸ್ಥಿತವಾಗಿ ಜರುಗುವಷ್ಟು ಕಾನೂನಿನ ಮತ್ತು ನಾಗರಿಕ ಜಗತ್ತು ಸಕ್ಷಮವಾಗಿದೆಯೇ? ಎಂಬ ಇವೆಲ್ಲಾ ಸಂದೇಹಗಳೊಂದಿಗೆ ಭಾಷೆಯ ಮೇಲೆ ಸಾಮಾಜಿಕ ಮಾಧ್ಯಮದ ಸದ್ಬಳಿಕೆ ಮತ್ತು ದುರ್ಬಳಕೆಯನ್ನು ಸಕಾರಾತ್ಮಕವಾಗಿ ಚಿಂತನೆಗೆ ಒಳಪಡಿಸುವ ಸಾಮಾಜಿಕ ಜೀವನಕ್ರಮವನ್ನು ರೂಪಿಸುವ ಮತ್ತು ಕಟ್ಟಿಕೊಳ್ಳಬೇಕಾದ ಸಾಧ್ಯತೆಗಳನ್ನು ಗುರುತಿಸಬೇಕಾದ ಸಂದರ್ಭ ಇದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನ ಮೇಲಿನ ಪ್ರಶ್ನೆಗಳನ್ನು ಗ್ರಹಿಕೆಯ ಮೂಲವಾಗಿಸುವ ಸಾಧ್ಯತೆಗಳನ್ನು ಹೊಂದಿದೆ. ಅಲ್ಲದೇ ಈ ಮಾಧ್ಯಮಗಳ ಪ್ರಭಾವವನ್ನು ಮತ್ತು ಪರಿಣಾಮಗಳೊಂದಿಗೆ ಬೀರಿರಬಹುದಾದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ಗುರುತಿಸಿಕೊಳ್ಳುವ ಪ್ರಯತ್ನ ಇದಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮವು ದುರುಪಯೋಗಕ್ಕೆ ತೀವ್ರವಾಗಿ ಒಳಗಾಗುತ್ತಿದೆ ಎನ್ನುವ ಅಭಿಪ್ರಾಯವಿದೆ. ಈ ವಿಚಾರವನ್ನು ಪ್ರಜಾವಾಣಿ ದಿನ ಪತ್ರಿಕೆಯ ವಾರ್ತಾ ಭಾಗದಲ್ಲಿ (6 ಮೇ 2017) ಪ್ರಸ್ತಾಪಿಸಿದಂತೆ, ''ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮವು ಸಾರ್ವಜನಿಕ ಸಮೂಹ ಮಾಧ್ಯಮವನ್ನು ಮೀರಿ ಬೆಳೆಯುತ್ತಿದ್ದು, ಜನಸಾಮಾನ್ಯರ ಮಧ್ಯೆ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಇದರಲ್ಲಿ ಜನಸಾಮಾನ್ಯರೂ ಸಾರ್ವಜನಿಕ ವಿದ್ಯಮಾನಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸಾಧ್ಯವಿರುವುದರಿಂದ ಕೆಲ ಮಾಧ್ಯಮ ತಜ್ಞರು ಇದನ್ನು ಜನಸಾಮಾನ್ಯರ ಸಬಲೀಕರಣದ ಬೆಳವಣಿಗೆಯೆಂದೂ ಬಣ್ಣಿಸಿರುವುದುಂಟು. ಆದರೆ ಈ ಮಾಧ್ಯಮ ಇಂದು ಬೆಳೆಯುತ್ತಿರುವ ರೀತಿ, ಅದರ ದಿಕ್ಕು, ಸ್ವರೂಪ ಮತ್ತು ಅದು ಬಳಕೆಯಾಗುತ್ತಿರುವ ಉದ್ದೇಶಗಳನ್ನು ಗಮನಿಸಿದರೆ ಯಾರಿಗಾದರೂ ಗಾಬರಿಯಾಗುತ್ತದೆ'' ಎಂಬ ವಿಚಾರವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ ಮತ್ತು ಇದು ಪರಿಶೀಲನೆಗೆ ಯೋಗ್ಯವೆನಿಸುತ್ತದೆ.

ಅಲ್ಲದೇ ಸಾಮಾಜಿಕ ಮಾಧ್ಯಮದ ಸ್ವಾತಂತ್ರ್ಯ ಮತ್ತು ಸೀಮಾತೀತವಾದ ನೆಲೆಗಳನ್ನು ಗೌರವಿಸುವ ಆಯ್ಕೆಯನ್ನೂ ಮಾನ್ಯಮಾಡಬೇಕಿರುವ ಅನಿವಾರ್ಯತೆಯೂ ಮುಖ್ಯವೆನಿಸುತ್ತದೆ. ಭಾರತದಲ್ಲಿ ಸಾಮಾಜಿಕ ಮಾಧ್ಯಮದ ನಿಯಂತ್ರಕದ ಅಗತ್ಯಗಳು, ಸಮಸ್ಯೆಗಳು ಮತ್ತು ಸವಾಲುಗಳು ಈ ಕಾಳಜಿಯನ್ನು ಪರಿಹರಿಸಬೇಕಿದೆ. ಅಲ್ಲದೇ ಸಾಮಾಜಿಕ ಮಾಧ್ಯಮ ನಿಯಂತ್ರಣಕ್ಕೆ ಸಂಬಂಧಿಸಿದ ಅಪರಾಧಿಕ ಸಾಮಾಜಿಕ-ರಾಜಕೀಯ ಸಮಸ್ಯೆಗಳನ್ನು ವಿಶ್ಲೇಷಿಸುತ್ತಾ ಭಾರತದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಚರ್ಚಿಸಬೇಕಾಗಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಾಗುವ ದಾಳಿ ಎನ್ನುವ ಮನೋಭಾವನೆಗೆ ಕಾರಣವಾಗದೇ ಸಮಕಾಲೀನ ಸಾಮಾಜಿಕ ಸಂಬಂಧಗಳ ಮೌಲ್ಯವನ್ನು ಗಟ್ಟಿಗೊಳಿಸುವ ಜವಾಬ್ದಾರಿಯನ್ನು ನೆನಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ಗೌಪ್ಯತೆ ಮತ್ತು ನಿಯಂತ್ರಣದ ಮೌಲ್ಯಗಳನ್ನು

ಪರಿಶೀಲಿಸುವ ಅಗತ್ಯವಿದೆ ಮತ್ತು ನೀತಿ ರಚನೆಗೆ ಸಹಾಯ ಮಾಡುವ ಮೂಲಕ 'ಭಾಷೆ–ಸಾಮಾಜಿಕ ಮಾಧ್ಯಮ–ಸಾಮಾಜಿಕ ಸಂಬಂಧಗಳ' ತ್ರಿಕೋನಾತ್ಮಕ ವ್ಯವಸ್ಥೆಯನ್ನು ಸಮತೋಲನಗೊಳಿಸುವ ತಂತ್ರಗಳನ್ನು ಪ್ರಸ್ತಾಪಿಸಬೇಕಿದೆ. ವ್ಯಸನ, ಅರಿವು, ಅತಿರೇಕದ ತಪ್ಪು ಮಾಹಿತಿ, ರಾಜಕೀಯ ಅನ್ವಯಿಕೆಗಳು ಮತ್ತು ಸಂಘರ್ಷಗಳು ಸೇರಿದಂತೆ ನಿಯಂತ್ರಕ ಚೌಕಟ್ಟಿನ ಕೂಲಂಕಷ ಪರೀಕ್ಷೆಗೆ ಪರಿಶೀಲಿಸಬೇಕಾದ ಹಲವಾರು ಅಂಶಗಳನ್ನು ಇದು ಒಳಗೊಳ್ಳಬೇಕಿದೆ. ಈ ಆನ್‌ಲೈನ್ ಸಾಮಾಜಿಕ ನೆಟ್‌ವರ್ಕ್‌ಗಳ ಸುಸ್ಥಿರತೆಗೆ ಇಂತಹ ಸಾಮಾಜಿಕ ಮತ್ತು ಬಳಕೆದಾರ–ಕೇಂದ್ರಿತ ಸವಾಲುಗಳನ್ನು ಎತ್ತಿ ತೋರಿಸುವ ದೃಢವಾದ ನಿಯಂತ್ರಕ ಚೌಕಟ್ಟಿನ ಅಗತ್ಯವನ್ನು ವಾದಿಸುವ ಅನಿವಾರ್ಯತೆ ಇದೆ. ಅಲ್ಲದೇ ತಪ್ಪು ಮಾಹಿತಿಯನ್ನು ಹರಡುವ, ವ್ಯಕ್ತಿ ಸ್ವಾತಂತ್ರ್ಯದ ಗೌಪ್ಯತೆಯನ್ನು ಅವಹೇಳನವಾಗಿಸುವ ಮತ್ತು ಸಾಮಾಜಿಕ ಮಾಧ್ಯಮದ ವರ್ತನೆಯನ್ನು ಪರಿಷ್ಕರಿಸುವ ಸಕಾರಾತ್ಮಕ ಮತ್ತು ನಕಾರಾತ್ಮಕ ಸಾಧ್ಯತೆಗಳ ಹಿನ್ನೆಲೆಯಲ್ಲಿ ಗ್ರಹಿಸಬೇಕಿದೆ. ಹಾಗಾಗಿ ಅವುಗಳ ಪ್ರಭೇದಗಳನ್ನು ರೂಪಿಸಿಕೊಳ್ಳುವ ಅಗತ್ಯವಿದೆ.

**ಸಾಮಾಜಿಕ ಮಾಧ್ಯಮಗಳ ಪ್ರಭೇದಗಳು:**

ಸಾಮಾಜಿಕ ಮಾಧ್ಯಮಗಳು ವಿಭಿನ್ನ ಉದ್ದೇಶಗಳು ಮತ್ತು ಬಳಕೆಯ ಆಧಾರದಲ್ಲಿ ಹಲವಾರು ಪ್ರಭೇದಗಳಾಗಿ ವಿಂಗಡಿಸಲ್ಪಟ್ಟಿವೆ. ಅವುಗಳಲ್ಲಿ ಪ್ರಮುಖ ಪ್ರಭೇದಗಳು ಹೀಗಿವೆ:

1. ಸಾಮಾಜಿಕ ಜಾಲತಾಣಗಳು (ಉದಾಹರಣೆ: ಫೇಸ್‌ಬುಕ್, ಲಿಂಕ್ಡ್‌ಇನ್).
2. ಸಂದೇಶ ವಿನಿಮಯ ಮಾಧ್ಯಮಗಳು (ಉದಾಹರಣೆ: ವಾಟ್ಸಾಪ್, ಟೆಲಿಗ್ರಾಂ, ಸಿಗ್ನಲ್).
3. ಮಾಧ್ಯಮ ಹಂಚಿಕೆ ತಾಣಗಳು (ಉದಾಹರಣೆ: ಇನ್‌ಸ್ಟಾಗ್ರಾಂ, ಯೂಟ್ಯೂಬ್, ಸ್ನಾಪ್‌ಚಾಟ್).
4. ಮೈಕ್ರೋ ಬ್ಲಾಗಿಂಗ್ ತಾಣಗಳು (ಉದಾಹರಣೆ: ಎಕ್ಸ್ – ಹಳೆಯ ಟ್ವಿಟರ್).
5. ಬ್ಲಾಗಿಂಗ್ ಮತ್ತು ಲೇಖನ ವೇದಿಕೆಗಳು (ಉದಾಹರಣೆ: ವರ್ಡ್‌ಪ್ರೆಸ್, ಮೀಡಿಯಮ್).
6. ವೃತ್ತಿಪರ ಜಾಲತಾಣಗಳು (ಉದಾಹರಣೆ: ಲಿಂಕ್ಡ್‌ಇನ್).
7. ಚರ್ಚಾ ವೇದಿಕೆಗಳು ಮತ್ತು ಫೋರಮ್‌ಗಳು (ಉದಾಹರಣೆ: ರೆಡಿಟ್, ಕ್ವೋರಾ).
8. ಗೇಮಿಂಗ್ ಮತ್ತು ವರ್ಚುವಲ್ ಸಮುದಾಯಗಳು (ಉದಾಹರಣೆ: ಡಿಸ್ಕೋರ್ಡ್, ಆನ್‌ಲೈನ್ ಗೇಮ್ ಪ್ಲಾಟ್‌ಫಾರ್ಮ್‌ಗಳು).

**ಸಕಾರಾತ್ಮಕ ಸಾಧ್ಯತೆಗಳು:**

ಸಾಮಾಜಿಕ ಮಾಧ್ಯಮಗಳು ಇಂದು ಸಮಾಜದ ಅಭಿಪ್ರಾಯ, ಚಿಂತನೆ ಮತ್ತು ಚಟುವಟಿಕೆಗಳನ್ನು ರೂಪಿಸುವ ಮತ್ತು ನಿಯಂತ್ರಿಸುವ ಶಕ್ತಿಯುತ ಸಾಧನಗಳಾಗಿವೆ. ಆದ್ದರಿಂದ, ನಾಗರಿಕ ಸಮಾಜ, ಅದರಲ್ಲೂ ಸಾಮಾನ್ಯ ನಾಗರಿಕರು, ಸಂಘ–ಸಂಸ್ಥೆಗಳು, ಸ್ವಯಂ ಸಾಮಾಜಿಕ ಸೇವಕರು, ಜನಪ್ರಿಯ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರು ಈ ಸಾಮಾಜಿಕ ಮಾಧ್ಯಮಗಳನ್ನು ಜವಾಬ್ದಾರಿಯುತವಾಗಿ ಬಳಸಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಕೆಲವು ಸಂಗತಿಗಳನ್ನು ಮತ್ತು ಸಾಧ್ಯತೆಗಳನ್ನು ಕಟ್ಟಿಕೊಳ್ಳಬೇಕಿದೆ.

- ಭಾಷೆಯ ಶುದ್ಧ ಮಾದರಿಗಳನ್ನು ನೀಡುವುದು.
- ಭಾಷಾ ಬಳಕೆಯ ಶುದ್ಧತೆ ಮತ್ತು ಅಗತ್ಯತೆಯ ಕುರಿತು ಜಾಗೃತಿ ಮೂಡಿಸುವುದು.
- ಹೊಸ ಭಾಷಾ ರೂಪಗಳ ವಿಶ್ಲೇಷಣೆ ಮಾಡಿ ಸಮಕಾಲೀನ ಸಂದರ್ಭಗಳಿಗೆ ಬಳಕೆಯ ಮಹತ್ವವನ್ನು ತಿಳಿಸುವುದು.
- ಪರಸ್ಪರ ಸೌಹಾರ್ದತೆಯನ್ನು ಕಾಪಾಡಿಕೊಳ್ಳಲು ಹಾಗೂ ಮಾನಹಾನಿಕರ ಪದ ಬಳಕೆಯನ್ನು ನಿಯಂತ್ರಿಸುವ ಮತ್ತು ನಿರ್ದೇಶನಾತ್ಮಕ ಕಾನೂನು ಮತ್ತು ನೈತಿಕ ಮೌಲ್ಯಗಳ ಪಾಲನೆಗೆ ಮಹತ್ವ ನೀಡುವುದು.
- ತ್ವರಿತ ಮತ್ತು ಸುಲಭ ಸಂವಹನದ ಕುರಿತು ಸಾಮಾಜಿಕ ಜಾಗೃತಿ ಮತ್ತು ಉತ್ತೇಜಕ ಸಂವಹನವನ್ನು ರೂಢಿಸಿಕೊಳ್ಳುವುದು.
- ಸುಳ್ಳು ಮಾಹಿತಿ ಮತ್ತು ವದಂತಿಗಳನ್ನು ತಡೆಯುವ ಸಾಧ್ಯತೆಗಳ ಕುರಿತು ಜಾಗೃತಿಯನ್ನು ಮೂಡಿಸುವುದು.
- ಡಿಜಿಟಲ್ ಸಾಕ್ಷರತೆ ಮತ್ತು ವಿವೇಕವನ್ನು ಬೆಳೆಸುವುದು, ಬಳಸುವ ಅನಿವಾರ್ಯತೆಯನ್ನು ತಿಳಿಸುವುದು.
- ಹೊಸ ಭಾಷಾ ರೂಪಗಳ ವಿಶ್ಲೇಷಣೆ ಮತ್ತು ಅವುಗಳ ಮಹತ್ವವನ್ನು ಮನವರಿಕೆ ಮಾಡಿಕೊಡುವುದು.
- ಸ್ಥಳೀಯ ಭಾಷೆಗಳ ಸಂರಕ್ಷಣೆಗೆ ಮಹತ್ವ ಮತ್ತು ಮಾರ್ಗದರ್ಶೀಯ ನಿಯಮಗಳನ್ನು ಜಾರಿಗೆ ತರುವುದು.
- ಭಾಷಿಕ ವ್ಯವಸ್ಥೆಯ ಮಹತ್ವವನ್ನು ಕುರಿತು ಯುವಜನರಿಗೆ ಮಾರ್ಗದರ್ಶನ ಮಾಡುವುದು.
- ಅಸಭ್ಯ ಮತ್ತು ದ್ವೇಷ ಭಾಷೆಗೆ ವಿರೋಧಾತ್ಮಕ ನಿಲುವುಗಳನ್ನು ರೂಪಿಸುವುದು.
- ತಂತ್ರಜ್ಞಾನದ ಸಹಕಾರವನ್ನು ಪಡೆದು ಭಾಷಾವಲಯವನ್ನು ಇನ್ನಷ್ಟು ಮೌಲ್ಯೀಕರಣಗೊಳಿಸುವುದು.

- ಸುಳ್ಳು ಮಾಹಿತಿ ಮತ್ತು ವದಂತಿಗಳಿಗೆ ತಡೆಯೊಡ್ಡುವ ಕ್ರಮಗಳನ್ನು ರೂಪಿಸಿ ಜಾರಿಗೆ ತರುವುದು.
- ವ್ಯಷ್ಟಿ ಮತ್ತು ಸಮಷ್ಟಿ ಸಂಬಂಧಗಳ ವಿಸ್ತರಣೆ ಮಾಡಿ ಪರಸ್ಪರರ ಭಾಷಾವಲಯವನ್ನು ಗೌರವಿಸುವ ವಾತಾವರಣವನ್ನು ಸೃಷ್ಟಿಸುವುದು. ಇದರಿಂದಾಗಿ ಭಾಷೆಯ ಬಳಕೆ, ರೂಪ ಮತ್ತು ಬೆಳವಣಿಗೆಯಲ್ಲಿ ಹಲವು ಬದಲಾವಣೆಗಳು ಕಂಡುಬರುತ್ತವೆ.

ಈ ಎಲ್ಲ ಸಕಾರಾತ್ಮಕ ಅಂಶಗಳನ್ನು ಆಧರಿಸಿ ಸಾಮಾಜಿಕ ಮಾಧ್ಯಮವನ್ನು ಮಾತುಕತೆಯಿಂದ ಕಾರ್ಯಕ್ಕೆ ತೆಗೆದುಕೊಳ್ಳುವುದು ಉತ್ತಮವೆನಿಸುತ್ತದೆ. ಸಾಮಾಜಿಕ ಮಾಧ್ಯಮದ ಬಳಕೆಗೆ ಮಾರ್ಗಸೂಚಿಗಳು, ಅಭಿವೃದ್ಧಿಯಲ್ಲಿ ಸ್ವತಂತ್ರ ಮಾಧ್ಯಮದ ಪಾತ್ರವನ್ನು ಗ್ರಹಿಸುವುದು. ರಾಷ್ಟ್ರ ನಿರ್ಮಾಣದಲ್ಲಿ ಮಾಧ್ಯಮದ ಪಾತ್ರ ಮತ್ತು ಡಿಜಿಟಲ್ ಯುಗದಲ್ಲಿ ಸಂವಹನದಲ್ಲಿ ಭಾಷಾ–ಮಾಧ್ಯಮ ಮತ್ತು ಮಾಧ್ಯಮದ ಸಾಮಾಜಿಕ ಹೊಣೆಗಾರಿಕೆಯನ್ನು ಗುರುತಿಸುವುದು. ಸಾಮಾಜಿಕ ಮಾಧ್ಯಮ ಬಳಕೆ ಮತ್ತು ಸಾಮಾಜಿಕ ಕಾರ್ಯವನ್ನು ಸಾಂಪ್ರದಾಯಿಕ ಮಾರ್ಕೆಟಿಂಗ್‌ನಲ್ಲಿ ಸಾಮಾಜಿಕ ಮಾಧ್ಯಮ, ರಾಜಕೀಯದಲ್ಲಿ ಸಾಮಾಜಿಕ ಮಾಧ್ಯಮದ ಮೌಲ್ಯಮಾಪನದ ಪಾತ್ರವನ್ನು ಉನ್ನತೀಕರಣಗೊಳಿಸುವುದು. ಇವೆಲ್ಲವುಗಳನ್ನು ಸಕಾರಾತ್ಮಕ ಅಂಶಗಳ ಭಾಗವಾಗಿ ನೋಡಬೇಕೆನಿಸುತ್ತದೆ. ಆದಾಗ್ಯೂ ಭಾಷೆ ಮತ್ತು ಸಾಮಾಜಿಕ ಮಾಧ್ಯಮಗಳ ನಡುವೆ ಅನೇಕ ನಕಾರಾತ್ಮಕ ಸಂಗತಿಗಳು ಸೇರಿಕೊಂಡಿವೆ. ಅವುಗಳನ್ನೂ ಗಂಭೀರವಾಗಿ ಪರಿಗಣಿಸಬೇಕಾಗಿದೆ.

**ನಕಾರಾತ್ಮಕ ಸಾಧ್ಯತೆಗಳು:**

ಇಂದಿನ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಮಾಧ್ಯಮಗಳು ಸಮಾಜದ ಸಂಸ್ಕೃತಿ, ಆಚಾರ–ವಿಚಾರಗಳು ಮತ್ತು ಮೌಲ್ಯಗಳಲ್ಲಿ ಮಹತ್ವದ ಪಲ್ಲಟಗಳನ್ನು ತಂದಿವೆ. ಇವು ಸಂಸ್ಕೃತಿಯ ಬೆಳವಣಿಗೆಯಲ್ಲಿಯೂ ಹಾಗೂ ಅದರ ಸ್ವರೂಪದ ಬದಲಾವಣೆಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿವೆ. ಇದರಿಂದಾಗಿ ಸಾಮಾಜಿಕ ಮಾಧ್ಯಮಗಳ ಕುರಿತಾಗಿ ನಕಾರಾತ್ಮಕ ಸಂಗತಿಗಳು ಹರಳುಗಟ್ಟುತ್ತಿವೆ. ವ್ಯಸನ, ಮಾನಸಿಕ ಆರೋಗ್ಯದ ಮೇಲೆ ಪರಿಣಾಮ, ಆತಂಕ, ಖಿನ್ನತೆ, ತಪ್ಪು ಮಾಹಿತಿ ಮತ್ತು ವದಂತಿಗಳು, ಗೌಪ್ಯತೆಯ ಸಮಸ್ಯೆಗಳು, ಸೈಬರ್ ಕ್ರೈಮ್, ಆನ್‌ಲೈನ್ ಕಿರುಕುಳದಿಂದ ಮಾನಸಿಕ ನೋವಿನಿಂದಾಗಿ ಗಂಭೀರ ಪರಿಣಾಮಗಳು, ಸಂಬಂಧಗಳ ಮೇಲೆ ಕೆಟ್ಟ ಪರಿಣಾಮ, ನಿದ್ರಾಭಂಗ, ಮಾನಸಿಕ ಅಸಮತೋಲನದ ಸಮಸ್ಯೆಯಿಂದಾಗಿ ಕೆಲಸದ ಗುಣಮಟ್ಟದಲ್ಲಿ ಕುಸಿತವಾಗುತ್ತಿದೆ ಎನ್ನುವ ಮನೋಭಾವಕ್ಕೆ ಕಾರಣವಾಗುತ್ತಿದೆ. ಇದರಿಂದಾಗಿ ಉತ್ಪಾದಕತೆ ಕುಸಿತವಾಗುತ್ತಿದೆ. ಮಕ್ಕಳು ಮತ್ತು ಯುವಕರ ಮೇಲೆ ಪರಿಣಾಮ ಬೀರುತ್ತಿರುವುದರಿಂದಾಗಿ ವಯಸ್ಸಿಗೆ ತಕ್ಕದಲ್ಲದ ವಿಷಯಗಳು, ತಪ್ಪು ಮೌಲ್ಯಗಳನ್ನು ಕಲಿಯುವ ಅಪಾಯ ಹೆಚ್ಚುತ್ತಿದೆ. ಇದು ವಿಶ್ವವ್ಯಾಪಿಯಾದ ಸಮಸ್ಯೆಯಾಗಿ ರೂಪುಗೊಳ್ಳುತ್ತಿದೆ. ಇದಕ್ಕೆಲ್ಲಾ ಈ ಅಂಶಗಳು ಪ್ರಮುಖವೆನಿಸುತ್ತವೆ:

- ಭಾಷಾ ವ್ಯವಸ್ಥೆಯ ಮೇಲೆ ಜಾಗತೀಕರಣದ ಪ್ರಭಾವ ಹೆಚ್ಚುತ್ತಿದೆ.
- ಪರಂಪರೆ ಮತ್ತು ಆಧುನಿಕತೆಯ ನಡುವೆ ವಿಷಮ ಸಂಘರ್ಷಗಳು ಹೆಚ್ಚುತ್ತಿವೆ.
- ಸಂಸ್ಕೃತಿಯ ಸಂರಕ್ಷಣೆ ಮತ್ತು ಪ್ರಚಾರದಲ್ಲಿ ಅತಿರೇಕಗಳ ಪರಿಣಾಮವಾಗುತ್ತಿದೆ.
- ವ್ಯಾಕರಣ ಮತ್ತು ಶುದ್ಧತೆಯ ಕುಸಿತ, ಶಾರ್ಟ್‌ಕಟ್ ಬರವಣಿಗೆ, ತಪ್ಪು ಅಕ್ಷರ ಪ್ರಯೋಗ ಹೆಚ್ಚುತ್ತಿದೆ.
- ಮಿಶ್ರ ಭಾಷೆಯ ಹೆಚ್ಚಳ, ಕನ್ನಡ–ಇಂಗ್ಲಿಷ್ ಮಿಶ್ರಣ (ಕಾಂಗ್ಲಿಷ್) ಅಧಿಕವಾಗಿದ್ದು, ಶುದ್ಧ ಭಾಷೆಯ ಬಳಕೆ ಕಡಿಮೆಯಾಗುತ್ತಿದೆ.
- ಆಳವಾದ ಬರವಣಿಗೆಯ ಕೊರತೆಯಿಂದಾಗಿ ಚಿಕ್ಕ ಪೋಸ್ಟ್‌ಗಳು, ತ್ವರಿತ ಪ್ರತಿಕ್ರಿಯೆಗಳು ಆಳವಾದ ಚಿಂತನೆಗೆ ಅಡ್ಡಿಯಾಗುತ್ತಿದೆ.
- ಅಶಿಷ್ಟ/ಅಸಂವಿಧಾನಿಕ ಭಾಷೆಯ ಬಳಕೆ, ಅನಾಮಧೇಯತೆ ಕಾರಣದಿಂದ ಅಸಭ್ಯ ಪದಗಳ ಬಳಕೆ ಹೆಚ್ಚಾಗುವ ಸಾಧ್ಯತೆ ದಟ್ಟವಾಗುತ್ತಿದೆ.

ಸಾಮಾಜಿಕ ಮಾಧ್ಯಮವು ಭಾಷೆಯನ್ನು ಬದಲಾಯಿಸುತ್ತಿದೆ, ಆದರೆ ಅದು ಸಂಪೂರ್ಣವಾಗಿ ಕೆಟ್ಟಿದೆ ಎಂಬ ಅರ್ಥವಲ್ಲವಾದರೂ ಜವಾಬ್ದಾರಿಯುತ ಪದಬಳಕೆ, ಶುದ್ಧ ಭಾಷೆಯ ಗೌರವ ಮತ್ತು ಸೃಜನಾತ್ಮಕ ಅಭಿವ್ಯಕ್ತಿಯೊಂದಿಗೆ ಸಾಮಾಜಿಕ ಮಾಧ್ಯಮವನ್ನು ಬಳಸಿದರೆ, ಭಾಷೆಯ ಬೆಳವಣಿಗೆಗೆ ಇದು ಮಹತ್ವದ ಸಾಧನವಾಗಬಹುದು. ಸಾಮಾಜಿಕ ಸ್ವಾಸ್ಥ್ಯ ಕ್ಷೀಣಿಸುತ್ತಿದೆ ಎಂಬ ಭಾವನೆ ಉಂಟಾಗುತ್ತಿರುವ ಈ ಹೊತ್ತಿನಲ್ಲಿ ಸಾಮಾಜಿಕ ಮಾಧ್ಯಮಗಳನ್ನು ಸಮತೋಲನದಿಂದ, ಜಾಗರೂಕತೆಯಿಂದ ಬಳಸಿದರೆ ಮಾತ್ರ ಲಾಭ; ಅತಿಯಾದ ಬಳಕೆ ಹಾನಿಕಾರಕವೆಂಬುದು ಈಗಾಗಲೇ ಭಾಷಾವಲಯ ಮನವರಿಕೆ ಮಾಡಿಕೊಂಡಿದೆ.

**ಉಪಸಂಹಾರ:**

'ಸಾಮಾಜಿಕ ಮಾಧ್ಯಮ'ವು ಭಾಷೆಯನ್ನು ಬದಲಾಯಿಸುತ್ತಿದೆ ಎನ್ನುವಂತಹ ಅಭಿಪ್ರಾಯ ನಿಸ್ಸಂದೇಹವಾಗಿದೆ. ಹಾಗೆಯೇ ಇದರ ಪರಿಣಾಮ ಸಕಾರಾತ್ಮಕವೂ ನಕಾರಾತ್ಮಕವೂ ಆಗಿದೆ. ಸರಿಯಾದ ಸಮತೋಲಿತ ಮತ್ತು ಜಾಗೃತ ಬಳಕೆಯಿಂದ ಸಾಮಾಜಿಕ ಮಾಧ್ಯಮವನ್ನು ಭಾಷಾಭಿವೃದ್ಧಿ ಮತ್ತು ಸಾಮಾಜಿಕ ಸಂಬಂಧಗಳಿಗೆ ಉಪಯೋಗಿಸಬಹುದು. ಸಾಮಾಜಿಕ ಮಾಧ್ಯಮಗಳು ನಾಗರಿಕ ಸಮಾಜದ ಕೈಯಲ್ಲಿರುವ ಪ್ರಬಲ ಸಾಧನ. ಜವಾಬ್ದಾರಿಯುತ ಬಳಕೆಯಿಂದ ಅವು ಸಮಾಜದ ಏಕತೆ, ಪ್ರಗತಿ ಮತ್ತು ನ್ಯಾಯವನ್ನು ಬಲಪಡಿಸಬಹುದು. ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ ಭಾಷಾ ತಜ್ಞರ ಪಾತ್ರ ಕೇವಲ ಅಧ್ಯಯನಕ್ಕೆ ಸೀಮಿತವಲ್ಲ. ಜಾಗೃತಿ, ಮಾರ್ಗದರ್ಶನ ಮತ್ತು ಮಾದರಿ ಬಳಕೆಯ ಮೂಲಕ ಅವರು ಭಾಷೆಯ ರಕ್ಷಣೆ ಮತ್ತು ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಬೇಕು. ಪ್ರತಿಯೊಂದು ಸಾಮಾಜಿಕ ಮಾಧ್ಯಮ ಪ್ರಭೇದಕ್ಕೂ ವಿಭಿನ್ನ ಉದ್ದೇಶ ಮತ್ತು ಬಳಕೆಯಿದೆ. ಅವುಗಳನ್ನು

ಜಾಗರೂಕತೆಯಿಂದ ಹಾಗೂ ಜವಾಬ್ದಾರಿಯುತವಾಗಿ ಬಳಸಿದರೆ, ವೈಯಕ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ. ಸಾಮಾಜಿಕ ಮಾಧ್ಯಮಗಳು ಯುವಜನಾಂಗದ ಕೈಯಲ್ಲಿರುವ ಶಕ್ತಿಶಾಲಿ ಸಾಧನ. ಅದನ್ನು ಜವಾಬ್ದಾರಿಯುತವಾಗಿ ಬಳಸಿದರೆ, ಅದು ವ್ಯಕ್ತಿಯೂ ಸಮಾಜವೂ ಅಭಿವೃದ್ಧಿಯಾಗಲು ಸಹಕಾರಿಯಾಗುತ್ತದೆ. ಸಾಮಾಜಿಕ ಮಾಧ್ಯಮದ ದುರ್ಬಳಕೆ ಭಾಷೆಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಜವಾಬ್ದಾರಿಯುತ ಬಳಕೆ, ಭಾಷಾ ಜಾಗೃತಿ ಮತ್ತು ಶುದ್ಧ ಬರವಣಿಗೆಯ ಅಭ್ಯಾಸದಿಂದ ಈ ದುಷ್ಪರಿಣಾಮಗಳನ್ನು ಕಡಿಮೆ ಮಾಡಬಹುದು. ಅಲ್ಲದೇ ಭಾಷಿಕ ವ್ಯವಸ್ಥೆಯು ಬಲಗೊಳ್ಳುವಂತಾಗಲು ಆನ್‌ಲೈನ್‌ನಂತಹ ವ್ಯವಸ್ಥೆಗಳನ್ನು ಆಯಾ ಸಮುದಾಯಗಳಿಗೆ ಒದಗಿಸಿದಾಗ ಅದರಿಂದ ಪ್ರೇರೇಪಿತರಾಗಿ ಭೌಗೋಳಿಕವಾದ ವಿಸ್ತಾರತೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿದೆ. ಹಾಗೆಯೇ ಸಾಮಾಜಿಕ ಮಾಧ್ಯಮವು ಒಂದು ಉದ್ಯಮಶೀಲತೆಯ ಭಾಗವಾಗಿ ಬೆಳೆಯುತ್ತಿದೆ.

## ಪರಾಮರ್ಶನ ಗ್ರಂಥಗಳು:


1. ಪ್ರಜಾವಾಣಿ ದಿನ ಪತ್ರಿಕೆಯ ವಾರ್ತಾ ಭಾಗದಲ್ಲಿ 6 ಮೇ 2017ರಲ್ಲಿ ಪ್ರಕಟವಾದ ಮಾಹಿತಿ.
2. ಫ್ರಾನ್ಸಿಸ್ ಪಿ. ಬಾರ್ಕ್ಲೇ ಮತ್ತು ಎನ್. ಬೂಬಾಲಕೃಷ್ಣನ್ (ಸಂ), (2024), ಸೋಷಿಯಲ್ ಮೀಡಿಯಾ ಇನ್ ಇಂಡಿಯಾ: ರೆಗ್ಯುಲೇಟರಿ ನೀಡ್ಸ್, ಇಶ್ಯೂಸ್ ಅಂಡ್ ಚಾಲೆಂಜಸ್, ನವದೆಹಲಿ: ಅಟ್ಲಾಂಟಿಕ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್.
3. ಸಂದೇಶ್ ಶ್ರೀವಾಸ್ತವ, (2015), ಸೋಷಿಯಲ್ ಮೀಡಿಯಾ: ಗ್ರೋಥ್ ಆ್ಯಂಡ್ ಡೆವೆಲಪ್‌ಮೆಂಟ್, ನವದೆಹಲಿ: ಆಸ್ಥಾ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್.
4. ಸಾರಾ ಮೆಕ್ಕೋರ್ಕೋರ್ಡೇಲ್, (2020), ಇನ್‌ಫ್ಲುಯೆನ್ಸ್: ಹೌ ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ಸ್ ಆರ್ ಶೇಪಿಂಗ್ ಅವರ್ ಡಿಜಿಟಲ್ ಫ್ಯೂಚರ್, ಲಂಡನ್: ಬ್ಲೂಮ್ಸ್‌ಬರಿ ಬ್ಯುಜಿನೆಸ್.
5. ಮಾಧುರಿ ಮಾಥೋಕ್, (2013), ನ್ಯೂಸ್ ಮೀಡಿಯಾ ಇನ್ ಇಂಡಿಯಾ: ದಿ ಇಂಪ್ಯಾಕ್ಟ್ ಆಫ್ ಗ್ಲೋಬಲೈಸೇಷನ್, ನವದೆಹಲಿ: ನ್ಯೂ ಸೆಂಚುರಿ ಪಬ್ಲಿಕೇಷನ್ಸ್.